ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವೇತನ ಶ್ರೇಣಿಗಳ ಬಗ್ಗೆ

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-

707 (1002) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB) ಯಲ್ಲಿ ಹಾಲಿ ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಜಾರಿಯಲ್ಲಿರುವ ಹುದ್ದೆಗಳು ಯಾವುವು ; ಅವುಗಳ ವೇತನ ಶ್ರೇಣಿಗಳೇನು ; (ಹುದ್ದೆವಾರು, ವೇತನ ಶ್ರೇಣಿವಾರು ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಮಂಡಳಿಯು ಒಂದು ಉದ್ಯಮವೇ ; ಹಾಗಾದÀರೆ ಇಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ನೀಡುತ್ತಿರುವ ವೇತÀನ ಶ್ರೇಣಿಗಳು ಯಾವುವು ; ರಾಜ್ಯ ಸರ್ಕಾರಿ ನೌಕರರಿಗೆ ನೀಡುವ ವೇತನ ಶ್ರೇಣಿಯನ್ನು ಮಂಡಳಿ ನೌಕರರಿಗೆ ನೀಡದಿರಲು ಕಾರಣಗಳೇನು ; (ವಿವರವಾದ ಮಾಹಿತಿ ನೀಡುವುದು)

(ಇ) ಸರ್ಕಾರದ ಇತರೆ ನಿಗಮ ಮಂಡಳಿಗೆ ಹೋಲಿಸಿದಾಗ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನೌಕರರು ಅತಿ ಹೆಚ್ಚಿನದಾಗಿ ವೇತನ ಪಡೆಯುತ್ತಿರಲು ಕಾರಣಗಳೇನು ? (ಸಂಪೂರ್ಣ ವಿವರವಾದ ಮಾಹಿತಿ ನೀಡುವುದು)